Sri G. SIVAPPA.—May I know whether it is not a fact that when the Hon'ble Minister for P.W. visited this place told the local officer, "Yes, it may be taken up"?

Sri H. M. CHANNABASAPPA.—It is true that I visited the spot and asked the Executive Engineer to examine and send up an estimate. (*Laughter*).

Mr. SPEAKER.—Sri Sivappa, this is not a stage. (*Laughter*).

Assistant Commissioners posted for Disposal of Darkhast Lands.

*Q.—21. Sri T. TARE GOWDA (Sira).—

Will the Government be pleased to state:—

(*a*) the number of Assistant Commissioners posted for disposal of darkhast lands to the landless persons, Harijans, political sufferers and insufficient holders and their jurisdictions of areas in the Divisions of new Mysore State;

(*b*) the emoluments and facilities and other allowances given to them;

(*c*) the total acreage of land each officer disposed so far in his respective jurisdiction;

(*d*) the number of grantees, their names and the extent that each grantee received and the survey numbers and the village and taluk where they got may be furnished?

*A.—Sri KADIDAL MANJAPPA (Minister for Revenue).—

(*a*) Three Assistant Commissioners have been appointed, one each for the districts of Tumkur and Chitradurga, Mysore and Mandya, Shimoga and Chickmagalur.

(*b*) They are given their usual pay and allowances. They have been provided with a jeep each.

(*c*)—

	A.	G.
(i) Assistant Commissioner, Tumkur and Chitradurga.	36,063	03
(ii) Assistant Commissioner, Mysore and Mandya.	16,754	08
(iii) Assistant Commissioner, Shimoga and Chickmagalur.	5,323	07

(*d*) The information called for is voluminous and its collection involves considerable time and labour.

ಶ್ರೀ ಟಿ. ತಾರೇಗೌಡ.—ನಾನು ಪ್ರಶ್ನೆಯನ್ನು ಕಳುಹಿಸಿದ್ದು 3ನೆಯ ನವೆಂಬರ್ 1959ರಲ್ಲಿ. ತಾವು ಸರ್ಕಾರದಿರದ ಉತ್ತರ ತರಿಸಿರುವುದು 28ನೆಯ ನವೆಂಬರ್ 1959ರಲ್ಲಿ. ಅಲ್ಲಿಂದೀಚೆಗೆ ಎಷ್ಟೋ ದಿವಸಗಳು ಕಳೆದುಹೋಗಿವೆ. ಈ ಮಧ್ಯೇ ಇದುವರೆಗೆ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸುಮಾರು 72 ಸಾವಿರ ಎಕರೆಗಳಿಗೂ ಮೇಲ್ಪಟ್ಟು ಜಮೀನನ್ನು ಸುಮಾರು 1,8982 ಜನಗಳಿಗೆ ಹಂಚಿರುತ್ತಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹಂಚಿರಬಹುದು. ಈ ಅಂಕಅಂಶಗಳೆಲ್ಲ ಕೆಲವು ದಿವಸಗಳ ಹಿಂದೆ ಬಂದಂಥವಗಳಾಗಿವೆ. ಆ ಆಧಾರದ ಮೇಲೆ ಈ ಉತ್ತರವನ್ನು ಈಗ ಸಭೆಗೆ ಒದಗಿಸಲಾಗಿದೆ.

ಶ್ರೀ ಟಿ. ತಾರೇಗೌಡ.—ಈಗ ಒಟ್ಟು ಒಂದು ಲಕ್ಷ ಎಕರೆ ಜಮೀನು ವಿಲೇವಾರಿ ಆದಂತಾಗಿದೆ. ಆದರೆ ಅವರೆಲ್ಲರೂ ಈಗ ಎಷ್ಟು ಪಲ್ಲ ಆಹಾರ ಧಾನ್ಯಗಳನ್ನು ಬೆಳೆದಿದ್ದಾರೆಂಬುದನ್ನು ಸರ್ಕಾರದವರು ತಿಳಿಸುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರೇ ದೊಡ್ಡ ವ್ಯವಸಾಯಗಾರರು. ಅದನ್ನೆಲ್ಲ ಅವರೇ ಲೆಕ್ಕ ಹಾಕಿಕೊಳ್ಳಬಹುದು.

Sri G. VENKATAI GOWDA.—May I know why such a vast difference exists between these three divisions?

Sri KADIDAL MANJAPPA.—The Assistant Commissioners for Mysore and Mandya and for Shimoga and Chitaldrug were appointed earlier and for the other areas Shimoga and Chickmagalur two months later. According to my information the third officer has distributed about 8,000 acres.

9 A.M.

ಶ್ರೀ ಎಸ್. ಜಿ. ನರಸಿಂಹೇ ಗೌಡ.—ಎಲ್ಲ ಡಿಸ್ಟ್ರಿಕ್ಟ್ ಗಳಿಗೂ ದರಖಾನ್ತು ಜಮೀನುಗಳನ್ನು ವಿಲೇ ಮಾಡುವುದಕ್ಕೆ ಅಸಿಸ್ಟೆಂಟು ಕಮೀಷನರುಗಳನ್ನು ನೇಮಕ ಮಾಡದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲ ಡಿಸ್ಟ್ರಿಕ್ಟ್ ಗಳಿಗೂ ನೇಮಕ ಮಾಡುವುದು ಅನಾವಶ್ಯಕ. ಎಲ್ಲೆ ಜಮೀನು ವಿಸ್ತೀರ್ಣ ಜಾಸ್ತಿ ಇದೆಯೋ ಅಂತಹ ಜಿಲ್ಲೆಗಳಲ್ಲಿರುವ ಜಮೀನುಗಳನ್ನು ಜಾಗ್ರತೆಯಾಗಿ ಹಂಚುವ

ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಈಗ ಸರಕಾರದ ವಶದಲ್ಲಿಯೇ ಎಷ್ಟು ಭೂಮಿ ಇದೆಯೋ ಅಷ್ಟೆಲ್ಲವನ್ನೂ ಹಂಚಬೇಕೆನ್ನುವ ಒಂದು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಡಿ. ಟಿ. ಸೀತಾರಾಮು ರಾವ್.—ಈಗ ನೇಮಕ ಮಾಡಿರುವ ಸ್ಪೆಷಲ್ಲು ಸಬ್ ಡಿವಿಜನ್ನು ಆಫೀಸರು ಗಳಿಂದಷ್ಟೇ ಅಲ್ಲದೆ ಈಗಿರತಕ್ಕ ಸಬ್ ಡಿವಿಜನ್ನು ಆಫೀಸರುಗಳಿಂದಲೂ ಜಮೀನನ್ನು ಹಂಚಲಾಗುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿ ಹೆಚ್ಚಿನ ವಿಸ್ತೀರ್ಣವಿದೆಯೋ ಅಲ್ಲಿ ಮೂರುಜನ ಅಧಿಕಾರಿ ಗಳನ್ನು ಈಗ ಹಂಚಬೇಕೆಂದು ನೇಮಕ ಮಾಡಲಾ ಗಿದೆ. ಕಳೆದ ಐದಾರು ತಿಂಗಳುಗಳಿಂದ ಸುಮಾರು ಒಂದು, ಒಂದೂವರೆ ಲಕ್ಷ ಎಕರೆಗಳಷ್ಟು ಭೂಮಿ ಯನ್ನು ಹಂಚಲಾಗಿದೆ.

ಶ್ರೀ ಬಿ. ಎನ್. ಬೋರಣ್ಣ ಗೌಡ—ಹಾಸನ ಜಿಲ್ಲೆ ಯಲ್ಲಿ ಸ್ಪೆಷಲ್ಲು ಅಸಿಸ್ಟೆಂಟು ಕಮೀಷನರವರನ್ನು ನೇಮಕ ಮಾಡದೇ ಇರಲು ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ —ಅಲ್ಲಿ ಹಂಚುವಷ್ಟು ಜಮೀನಿರಲಿಲ್ಲ.

ಶ್ರೀ ಬಿ. ಎನ್. ಬೋರಣ್ಣ ಗೌಡ.—ಅಲ್ಲಿರುವ ಅಮ್ಯತಮಹಲ್ಲು ಕಾವಲಿನ ಜಮೀನುಗಳ ವಿಲೇವಾರಿ ಆಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವಿಲೇ ಆಗಿವೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ತುಮಕೂರು ಜಿಲ್ಲೆಯಲ್ಲಿ ಎಷ್ಟು ಜಮೀನನ್ನು ಹಂಚಲಾಗಿದೆ.

Sri KADIDAL MANJAPPA.—I have no information just at present.

ಶ್ರೀ ಎಂ. ಶಂಕರಪ್ಪ.—ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ನೇಮಕ ಮಾಡಿರುವ ಸ್ಪೆಷಲ್ಲು ಆಫೀಸರುಗಳು ಆಯಾ ಗ್ರಾಮಗಳಿಗೆ ಹೋಗಿ ಸ್ಥಳ ವನ್ನು ನೋಡದೆ ಯಾವಾಗಲೋ ಪ್ರೋಗ್ರಾಂ ಹಾಕಿ ಕೊಂಡು ಟಿ.ಬಿ.ಗೆ ಬಂದು ವಿಲೇವಾರಿ ಮಾಡಿದರೆ ಅಲ್ಲಿಯ ಜನಗಳಿಗೆ ಗೊತ್ತಾಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳಕ್ಕೆ ಹೋಗಿ ಅಲ್ಲಿ ಹಂಚಲಾಗಿದೆ ಎಂದು ಸರಕಾರಕ್ಕೆ ಸಮಾಚಾರ ಬಂದಿದೆ.

ಶ್ರೀ ಎಂ. ಶಂಕರಪ್ಪ.—ಈಗ ನೇಮಕವಾಗಿರುವ ಅಧಿಕಾರಿಗಳು ತುಮಕೂರಿಗೆ ಒಂದು ಸಾರಿ ಬರುತ್ತೇ ವೆಂದು ಪ್ರೋಗ್ರಾಂ ಹಾಕಿಕೊಂಡು ಅಂತಹ ಸ್ಥಳಗಳಿಗೆ ಬಾರದಿರುವುದರಿಂದ ಎಷ್ಟೋ ಸಲ ಜನಗಳಿಗೆ ತೊಂದರೆಯಾಗಿರುವುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗಲಾದರೂ ಒಂದು ಸಂದರ್ಭದಲ್ಲಿ ಪ್ರೋಗ್ರಾಮಿನಂತೆ ಬರಲು ಆಗದೆ ಅದು ಕ್ಯಾನ್ಸಲ್ಲು ಆಗಿರಬಹುದು. ಅಂತಹ ಸಂದರ್ಭದಲ್ಲಿ ಸ್ವಲ್ಪ ಮಾರ್ಜಿನ್ನು ಕೊಡಬೇಕಾಗು ತ್ತದೆ.

ಶ್ರೀ ಟಿ. ಎನ್. ಮೂಡಲಗಿರಿ ಗೌಡ.—ಆಫೀಸರು ಗಳು ಸ್ಥಳಕ್ಕೇ ಹೋಗಿ ಆ ಸ್ಥಳದಲ್ಲಿ ಯಾರು ಲ್ಯಾಂಡು ಲೆಸ್ಸಾಗಿರುತ್ತಾರೆಯೋ ಎಂಬುದನ್ನು ತಿಳಿದುಕೊಂಡು ಅಂತಹವರಿಗೆ ಜಮೀನುಗಳನ್ನು ಕೊಡುತ್ತಿದ್ದರೂ ಕೂಡ ಕೆಲವು ಸಂದರ್ಭಗಳಲ್ಲಿ ಜಮೀನನ್ನು ಪಡೆದಿರು ವವರು ಮತ್ತೆ ಜಮೀನನ್ನು ಕ್ರಯಕ್ಕೆ ಕೊಡುತ್ತಿದ್ದಾರೆ. ಹೀಗೆ ಕ್ರಯವಾಗುವುದನ್ನು ತಪ್ಪಿಸಲು ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕ್ರಯವಾಗದೇ ಇರು ವಂತಹ ಕೆಲವು ನಿರ್ಬಂಧಗಳೂ ಈ ಮಸೂದೆಯಲ್ಲಿವೆ.

ಶ್ರೀ ಡಿ. ಟಿ. ಸೀತಾರಾಮು ರಾವ್.—ಇಲ್ಲಿ ಕೊಟ್ಟಿ ರುವ ಉತ್ತರದಲ್ಲಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಹಾಗೆ, 5,323 ಎಕರೆಗಳಷ್ಟು ಹಂಚಲಾಗಿದೆ ಎಂದು ಹೇಳಿದ್ದೀರಿ. ಇಲ್ಲಿ ಹೆಚ್ಚಿನ ಜಮೀನು ಇರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಶಿವಮೊಗ್ಗ ಜಿಲ್ಲೆಗೆ ಎರಡು ತಿಂಗಳಿನ ಅನಂತರ ಸ್ಪೆಷಲ್ಲು ಆಫೀಸರನ್ನು ನೇಮಕ ಮಾಡಲಾಯಿತು. ಅದಕ್ಕೋಸ್ಕರ ಜಿಲ್ಲೆಯ ವಿಸ್ತೀರ್ಣ ಕಡಮೆಯಾಯಿತು. ಆದರೆ ಇತ್ತೀಚೆಗೆ ವರದಿ ಬಂದಿರುವ ಪ್ರಕಾರ ಸುಮಾರು 8,000 ಎಕರೆ ಗಳಷ್ಟು ಜಮೀನನ್ನು ಹಂಚಲಾಗಿದೆ.

ಶ್ರೀ ಎಂ. ಸಿ. ನರಸಿಂಹನ್.—ಕೋಲಾರ ಜಿಲ್ಲೆ ಯಲ್ಲಿ ಪೊಲಿಟಿಕಲ್ಲು ಸಫರರುಗಳಿಗೆ ಜಮೀನು ಕೊಟ್ಟಿಲ್ಲ ಎಂಬುದು ಸರಕಾರಕ್ಕೆ ಗೊತ್ತಿದೆಯೇ?

Mr. SPEAKER.—That is outside the scope of the question.

Sri M. C. NARASIMHAN.—I want to bring to your notice that this land is being distributed to political suffers also.

Mr. SPEAKER.—Your question pertains to Kolar district.

Sri M. C. NARASIMHAN.—Then, I will put a general question. ಕೆಲವು ಕಡೆ ಗಳಲ್ಲಿ ಪೊಲಿಟಿಕಲ್ಲು ಸಫರರುಗಳಲ್ಲಿ, ಕೆಲವರಿಗೆ ಜಮೀನು ಸಿಕ್ಕಿಲ್ಲ ಎಂದು ಸರಕಾರಕ್ಕೆ ಮಾನವಿ ಗಳೇನಾದರೂ ಬಂದಿವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನಿರ್ದಿಷ್ಟವಾಗಿ ತಿಳಿದು ಬಂದಿಲ್ಲ.

Sri J. B. MALLARADHYA.—What is this new kind of sufference called political sufference?

ಅಧ್ಯಕ್ಷರು.—ನಿಮಗೆ ಸಫರನ್ನು ಏನು ಎನ್ನುವುದೇ ಗೊತ್ತಿಲ್ಲ. (ನಗು)

ಶ್ರೀ ಕೆ. ಎಂ. ನರಸಿಂಹಯ್ಯ.—ಈ ಜಮೀನನ್ನು ಹಂಚುವಾಗ ಹರಿಜನರಿಗಾಗಿ ಎಷ್ಟು ಪರ್ಸಂಟು ಎನ್ನುವುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಲ್ಯಾಂಡು ರೆವೆನ್ಯೂ ನಿಬಂಧನೆಗಳಲ್ಲಿ ಇರುವ ನಿಯಮಾವಳಿಗಳ ಪ್ರಕಾರ ಯಾವುದಾದರೂ ಜಮೀನಿದ್ದರೆ ಅದನ್ನು ಹಂಚುವಾಗ ಹರಿಜನರಿಗೇ ಮೊದಲು ಪ್ರಾಮುಖ್ಯತೆಯನ್ನು ಕೊಟ್ಟು ಅನಂತರ ಇತರರಿಗೆ ಹಂಚಬೇಕೆಂದು ಇದೆ. ಈಗ ಬಹು ಭಾಗ ಜಮೀನನ್ನು ಹರಿಜನರಿಗೆಯೇ ಕೊಡ ಲಾಗಿದೆ.

Sri C. J. MUCKANNAPPA.—Out of the total acreage of 36,063.03, may I know how much land has been distributed amongst Harijans and the landless?

Sri Kadidal MANJAPPA.—Roughly 60 to 75 percent of the area has been given to the landless scheduled caste people.

———